ಪೊಲೀಸ್ ಮಹಾ ನಿರ್ದೇಶಕರು ಹಾಗೂ
ಮಹಾ ನಿರ್ದೇಶಕರು
ಕರ್ನಾಟಕ ಅಗ್ನಿಶಾಮಕ ಮತ್ತು
ತುರ್ತು ಸೇವೆಗಳು ಹಾಗೂ ರಾಜ್ಯ ವಿಪತ್ತು
ನಿರ್ವಹಣಾ ಪಡೆಯ ನಿರ್ದೇಶನಾಲಯ
ನಂ.1, ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ
ಬೆಂಗಳೂರು-560 042

ದೂರವಾಣಿ : 25570733
22971501
ಫ್ಯಾಕ್ಸ್ : 22971512

ಸಂಖ್ಯೆ:ಜಿಬಿಸಿ(1)395/2021 22-06-2022

ಗೆ,

**ಆಯುಕ್ತರು,**
**ಕೋಲಾರ ನಗರ ಪುರಸಭೆ**
**ಹಳೆ ಬಸ್ ಸ್ಟಾಂಡ್ ಹತ್ತಿರ,**
**ಕೋಲಾರ-563101.**

ಮಾನ್ಯರೆ,

ವಿಷಯ: ಕೋಲಾರ ಜಿಲ್ಲೆ ಮತ್ತು ತಾಲ್ಲೂಕು, ಕೋಗಿಲಹಳ್ಳಿ ಗ್ರಾಮ, ವಾರ್ಡ್ ನಂ.06, ಸರ್ವೆ ನಂ.2/2, ಖಾತೆ ನಂ.6-4-567-101 ರಲ್ಲಿ ನಿರ್ಮಿಸಿರುವ ಬಹುಮಹಡಿ ಶೈಕ್ಷಣಿಕ ಕಟ್ಟಡದ ಸ್ವಾಧೀನತೆ ಪಡೆಯಲು ಕ್ಲಿಯರೆನ್ಸ್ ಪತ್ರ ನೀಡುವ ಬಗ್ಗೆ.

ಉಲ್ಲೇಖ : 1) ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ನಿರಾಕ್ಷೇಪಣಾ ಪತ್ರ ಸಂ.ಜಿಬಿಸಿ(1)395/2021 ದಿನಾಂಕ 01-02-2022.
2) ಮೆ॥ ಕೃಷಿ ಎಜುಕೇಷನ್ ಟ್ರಸ್ಟ್, ಕೋಲಾರ ರವರ ಪತ್ರ ದಿನಾಂಕ 25-03-2022.

<<<<<<>>>>>>>

ಕೋಲಾರ ಜಿಲ್ಲೆ ಮತ್ತು ತಾಲ್ಲೂಕು, ಕೋಗಿಲಹಳ್ಳಿ ಗ್ರಾಮ, ವಾರ್ಡ್ ನಂ.06, ಸರ್ವೆ ನಂ.2/2, ಖಾತೆ ನಂ.6-4-567-101 ರಲ್ಲಿ 21.90 ಮೀಟರ್ ಎತ್ತರದ 2 ನೆಲಹಂತ ಮತ್ತು 4 ಮೇಲಂತಸ್ತುಗಳನ್ನು ಹೊಂದಿರುವ ಈಗಾಗಲೇ ನಿರ್ಮಿಸಿದ್ದ ಬಹುಮಹಡಿ ಶೈಕ್ಷಣಿಕ ಕಟ್ಟಡಕ್ಕೆ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಿಂದ ದಿನಾಂಕ 01-02-2022 ರಂದು ನಿರಾಕ್ಷೇಪಣಾ ಪತ್ರ ನೀಡಲಾಗಿದೆ.

ಪ್ರಸ್ತುತ ಕಟ್ಟಡದ ನಿರ್ಮಾಪಕರಾದ ಮೆ॥ ಕೃಷಿ ಎಜುಕೇಷನ್ ಟ್ರಸ್ಟ್, ಕೋಲಾರ ರವರು, ತಮ್ಮ ಉಲ್ಲೇಖಿತ ಪತ್ರದಲ್ಲಿ, ಸದರಿ ಬಹುಮಹಡಿ ಶೈಕ್ಷಣಿಕ ಕಟ್ಟಡದ ನಿರ್ಮಾಣ ಹಾಗೂ ಅಗ್ನಿಶಮನ ಉಪಕರಣಗಳ ಅಳವಡಿಕೆ ಕಾರ್ಯ ಮುಗಿದಿದ್ದು, ಅದರ ಸ್ವಾಧೀನತೆಯನ್ನು ಪಡೆಯಲು ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಕ್ಲಿಯರೆನ್ಸ್ ಪತ್ರ ನೀಡುವಂತೆ ಕೋರಿರುತ್ತಾರೆ.

ಕಟ್ಟಡದ ನಿರ್ಮಾಪಕರ ಕೋರಿಕೆಯಂತೆ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಧಿಕಾರಿಗಳು ದಿನಾಂಕ 02-06-2022 ರಂದು ಕೋಲಾರ ಜಿಲ್ಲೆ ಮತ್ತು ತಾಲ್ಲೂಕು, ಕೋಗಿಲಹಳ್ಳಿ ಗ್ರಾಮ, ವಾಡ್ ನಂ.06, ಸರ್ವೆ ನಂ.2/2, ಖಾತೆ ನಂ.6-4-567-101 ರಲ್ಲಿ ನಿರ್ಮಿಸಿರುವ ಬಹುಮಹಡಿ ಶೈಕ್ಷಣಿಕ ಕಟ್ಟಡವನ್ನು ಕಟ್ಟಡ ನಿರ್ಮಾಪಕರು ಕಟ್ಟಡದ ಎತ್ತರವನ್ನು 21.90 ಮೀಟರ್‌ನಿಂದ 22.00 ಮೀಟರ್‌ಗೆ ಹೆಚ್ಚಿಸಿ ನಿರ್ಮಿಸಿದ್ದು ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯು ಮಾಡಿರುವ ಎಲ್ಲಾ ಸಲಹೆ ಹಾಗೂ ಶಿಫಾರಸ್ಸುಗಳನ್ನು ಪೂರ್ಣ ಅನುಷ್ಠಾನಗೊಳಿಸಿರುವುದಾಗಿ, ಅದರಲ್ಲಿ ವಾಸಿಸುವ ನಿವಾಸಿ/ಸಿಬ್ಬಂದಿಗಳಿಗೆ ಅಗ್ನಿಶಮನ ಕುರಿತ ತರಬೇತಿ ಮಾತ್ರ ಬಾಕಿಯಿದ್ದು, ಕಟ್ಟಡದ ಸ್ವಾಧೀನತೆಯ ತರುವಾಯ ತರಬೇತಿ ನೀಡಲು ಸಾಧ್ಯವಾಗುತ್ತದೆಂದು ತಿಳಿಸಿರುತ್ತಾರೆ.

ಆದ್ದರಿಂದ ಕೋಲಾರ ಜಿಲ್ಲೆ ಮತ್ತು ತಾಲ್ಲೂಕು, ಕೋಗಿಲಹಳ್ಳಿ ಗ್ರಾಮ, ವಾಡ್ ನಂ.06, ಸರ್ವೆ ನಂ.2/2, ಖಾತೆ ನಂ.6-4-567-101 ರಲ್ಲಿ **22.00 ಮೀಟರ್ ಎತ್ತರದ 2 ನೆಲಹಂತ ಮತ್ತು 4 ಮೇಲಂತಸ್ತುಗಳನ್ನು ಹೊಂದಿರುವ ಬಹುಮಹಡಿ ಶೈಕ್ಷಣಿಕ ಕಟ್ಟಡಕ್ಕೆ** ಸ್ವಾಧೀನತೆ ಪಡೆಯಲು ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ನಿರಾಕ್ಷೇಪಣಾ ಪತ್ರ ಸಂಖ್ಯೆ ಜಿಬಿಸಿ(1)319/2021 ದಿನಾಂಕ 01-02-2022 ರಲ್ಲಿ ತಿಳಿಸಿರುವಂತೆ, ಅಗ್ನಿರಕ್ಷಣೆ ಮತ್ತು ನಿಯಂತ್ರಣ ಹಾಗೂ ಅಗ್ನಿನಂದಿಸುವ ಉಪಕರಣಗಳ ಅಳವಡಿಕೆ ಹಾಗೂ ರಕ್ಷಣಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು, ಹಾಗೂ ಅಗ್ನಿಶಮನ ಉಪಕರಣಗಳನ್ನು ಸುಸ್ಥಿತಿಯಲ್ಲಿಡಬೇಕೆಂಬ ಷರತ್ತಿನ ಮೇಲೆ ಸ್ವಾಧೀನತಾ ಪ್ರಮಾಣ ಪತ್ರ ನೀಡಲು ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಯಾವ ಆಕ್ಷೇಪಣೆ ಇಲ್ಲವೆಂದು ತಿಳಿಸಿದೆ.

**ಕಟ್ಟಡ ನಿರ್ಮಾಪಕರು ದಿನಾಂಕ 02-06-2022 ರಂದು ಒಪ್ಪಿರುವಂತೆ ಸಲ್ಲಿಸಿರುವ ಮುಚ್ಚಳಿಕೆ ಪತ್ರದಂತೆ ಕಟ್ಟಡದಲ್ಲಿನ ಶೇಕಡಾ 40 ರಷ್ಟು ನಿವಾಸಿ/ನೌಕರರಿಗೆ ಅಗ್ನಿರಕ್ಷಣೆ ಮತ್ತು ನಿಯಂತ್ರಣ ಕ್ರಮಗಳ ಬಗ್ಗೆ, ಬೆಂಗಳೂರಿನ ಆರ್.ಎ.ಮುಂಡ್ಕುರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡಮಿಯಲ್ಲಿ ಸೂಕ್ತ ತರಬೇತಿಯನ್ನು 6 ತಿಂಗಳೊಳಗೆ ಪಡೆಯಲು ವ್ಯವಸ್ಥಿಸಬೇಕೆಂಬ ಷರತ್ತಿಗೊಳಪಟ್ಟಿದೆ.**

**ಈ ಕ್ಲಿಯರೆನ್ಸ್ ಪತ್ರವು ಸರ್ಕಾರಿ ಆದೇಶ ಸಂ.ಒಇ 33 ಕಅಸೇ 2011 ದಿನಾಂಕ 07-07-2011 ರಂತೆ, ಈ ದಿನಾಂಕದಿಂದ ಮುಂದಿನ 2 ವರ್ಷಗಳವರೆಗೆ ಚಾಲ್ತಿಯಲ್ಲಿರುತ್ತದೆ.ತದನಂತರ ಈ ಕ್ಲಿಯರೆನ್ಸ್ ಪತ್ರವನ್ನು ದಿನಾಂಕ -06-2024 ರೊಳಗೆ ನವೀಕರಿಸುವಂತೆ ತಿಳಿಸಲಾಗಿದೆ.**

ಒಂದು ವೇಳೆ ಯಾವುದೇ ಸಂದರ್ಭದಲ್ಲಿ ಕಟ್ಟಡದಲ್ಲಿ ಇಲಾಖಾ ಶಿಫಾರಸ್ಸಿನನ್ವಯ ಅಳವಡಿಸಿರುವ ಅಗ್ನಿನಿವಾರಣೆ ಹಾಗೂ ಅಗ್ನಿಶಮನದ ಉಪಕರಣಗಳು ಸುಸ್ಥಿತಿಯಲ್ಲಿ ಇಲ್ಲದೇ ಇರುವುದು ಕಂಡು ಬಂದರೆ ಅಥವಾ ರಕ್ಷಣಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದಿದ್ದರೆ ಅಥವಾ **ಕಾನೂನಿನ್ವಯ ಬಿಟ್ಟಿರುವ ತೆರೆದ ಪ್ರದೇಶದಲ್ಲಿ ಅಥವಾ ಕಟ್ಟಡದಲ್ಲಿ ಯಾವುದೇ ಹೆಚ್ಚುವರಿ ನಿರ್ಮಾಣ ಮಾಡಿದರೆ**, ಅಥವಾ ಯಾವುದೇ ರೀತಿ ಖಾಯಂ/ತಾತ್ಕಾಲಿಕ ಅಡಚಣೆಗಳನ್ನುಂಟು ಮಾಡಿದರೆ ಈ ಕ್ಲಿಯರೆನ್ಸ್ ಪತ್ರ ಅನೂರ್ಜಿತಗೊಳ್ಳುವುದು ಹಾಗೂ ಕಾನೂನಿನ ಚೌಕಟ್ಟಿನಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಡಿ.ಜಿ.ಪಿ. ಮತ್ತು ಡಿ.ಜಿ.ರವರಿಂದ
ರಿಂದ ಅನುಮೋದಿಸಲ್ಪಟಿದೆ

ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ... ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಕಚೇರಿ ಬೆಂಗಳೂರು 560042

ತಮ್ಮ ವಿಶ್ವಾಸಿ,

22/6/22

(ಟಿ.ಎನ್.ಶಿವಶಂಕರ)
**ಪೊಲೀಸ್ ಮಹಾ ನಿರ್ದೇಶಕರು**
**ಹಾಗೂ ಮಹಾ ನಿರ್ದೇಶಕರು**
**ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು.**
**ರವರ ಪರವಾಗಿ**

ಪ್ರತಿ:
1) ಮೆ॥ ಕೃಷಿ ಎಜುಕೇಷನ್ ಟ್ರಸ್ಟ್, ವಾರ್ಡ್ ಸಂ.6, ಕೊಗಿಲಹಳ್ಳಿ, ಎನ್‌ಹೆಚ್-76, ಕೋಲಾರ -563102.
2) ಉಪ ನಿರ್ದೇಶಕರು (ತರಬೇತಿ & ಎಸ್‌ಡಿಆರ್‌ಎಫ್), ಅಗ್ನಿಶಾಮಕ ಮತ್ತು ತುರ್ತು ಸೇವೆಗಳು.